ಯಾರು?' ಎಂದರು. ಕೋಣೆಯ ತುಂಬಾ ಓಡಾಡಿ ಮತ್ತೆ ಮತ್ತೆ ಇದೇ ಪ್ರಶ್ನೆ ಕೇಳಿದರು. ನಾವೆಲ್ಲ ಸುಮ್ಮನೆ ಕುಳಿತಿದ್ದೆವು. ಒಮ್ಮೆ ನನ್ನತ್ತ ನೋಡಿ 'ವಿಸಾಜಿ ನೀನು ಮಾಡಿರುವೆಯಾ?' ಎಂದರು. ನಾನು ಬೆಚ್ಚಿದೆ. 'ಇಲ್ಲ ಸರ್' ಅಂತ ತಲೆ ಆಡಿಸಿದೆ. 'ಹಾಗಾದರೆ ಶಿವಾಜಿ ನೀನು ಮಾಡಿರುವೆಯಾ?' ಅಂತ ಇನ್ನೊಬ್ಬ ವಿದ್ಯಾರ್ಥಿಯ ಕಡೆಗೆ ತಿರುಗಿದರು. ಅವನು ಕೂಡ 'ಇಲ್ಲ ಸರ್' ಅಂತ ಗಲಿಬಿಲಿಗೊಂಡ. ಸತೀಶ್, ಮಹೇಶ್, ಜಗಪ್ಪ, ಮರೆಪ್ಪ, ಹೀಗೆ ಮೂರ್ನಾಲ್ಕು ವಿದ್ಯಾರ್ಥಿಗಳ ಹೆಸರು ಹಾದುಹೋದವು. ನಮಗೆಲ್ಲ ಭಯ ಮತ್ತು ಮುಜುಗರ. ಕೊನೆಗೆ 'ನನಗೆ ಗೊತ್ತು, ಇದನ್ನು ಮಾಡಿದವನು ಊರ ಗೌಡ. ಇನ್ನು ಅವನು ಜೀವಂತ ಇರಲಿಕ್ಕೆ ಸಾಧ್ಯವಿಲ್ಲ' ಅಂತ ರಭಸದಿಂದ ಕಾಲನ್ನು ನೆಲಕ್ಕೆ ಕುಟ್ಟಿದರು. ಮುಂದಿನ ತರಗತಿ ನಾಳೆ ಮಾಡೋಣ ಅಂತ ಹೇಳಿ ಹೊರಟುಹೋದರು. ನಮಗೆ ಸುಧಾರಿಸಿಕೊಳ್ಳಲು ಸ್ವಲ್ಪ ಸಮಯವೇ ಹಿಡಿಯಿತು. ಅವರಿಗೆ ಸಕ್ಕರೆ ಕಾಯಿಲೆ ಇದ್ದುದರಿಂದ ಚಪ್ಪಲಿ ಹಾಕುತ್ತಿರಲಿಲ್ಲ. ದಪ್ಪವಾದ ಶೂ ಬಳಸುತ್ತಿದ್ದರು. ಅವುಗಳನ್ನು ಎಳೆಯುತ್ತ ನಡೆದುಹೋದರು. ಇನ್ನೊಮ್ಮೆ 'ಶ್ರೀಕೃಷ್ಣ ಪಾರಿಜಾತ' ಕಲಿಸುತ್ತಿದ್ದರು. ಅದರಲ್ಲಿ ಕೃಷ್ಣನಿಗಾಗಿ ರುಕ್ಮಿಣಿ ಮತ್ತು ಸತ್ಯಭಾಮೆ ಜಗಳವಾಡುತ್ತಾರೆ. ವಾಲೀಕಾರರು ನನ್ನೆಡೆಗೆ ಬಂದು 'ವಿಸಾಜಿ ನೀನು ಕೃಷ್ಣ' ಎಂದರು. ನಾನು ದೈನ್ಯ ಸ್ವರದಲ್ಲಿ 'ಬೇಡ ಸರ್' ಅಂದೆ. 'ಇಲ್ಲ, ಇದು ಪಾತ್ರ, ಸುಮ್ಮನೆ ಒಪ್ಪಿಕೊ' ಎಂದರು. ಒಲ್ಲದ ಮನಸ್ಸಿನಿಂದಲೇ 'ಹೂಂ' ಎಂದೆ. ಆಮೇಲೆ ಹುಡುಗಿಯರ ಕಡೆ ತೆರಳಿ 'ನೀನು ರುಕ್ಮಿಣಿ, ಇವಳು ಸತ್ಯಭಾಮೆ. ನೀವಿಬ್ಬರೂ ಕೃಷ್ಣನಿಗಾಗಿ ಜಗಳವಾಡುತ್ತೀರಾ' ಎಂದರು. ಅವರು ದಿಗಿಲುಗೊಂಡು ಮಾತಾಡದೆ ಕುಳಿತರು. ನಾನು ಒದ್ದಾಡಿಹೋದೆ. ಆಮೇಲೆ ಒಂದು ವಾರ ಆ ಇಬ್ಬರೂ ಹುಡುಗಿಯರು ತರಗತಿಯಿಂದ ನಾಪತ್ತೆ. ಇದಾದ ತರುವಾಯ ನಾನು ಮುಂದಿನ ಸೀಟಿನಲ್ಲಿ ಕುಳಿತುಕೊಳ್ಳುವ ಅಪಾಯ ಮನಗಂಡೆ. ಗುರುಗಳ ತರಗತಿ ಇದ್ದಾಗ ಮಾತ್ರ ಯಾವುದಾದರೂ ಸುರಕ್ಷಿತ ತಾಣ ಹುಡುಕಿ ಕೂತಿರುತ್ತಿದ್ದೆ. ಅವರು ವಿದ್ಯಾರ್ಥಿಗಳತ್ತ ನೋಡುತ್ತಿದ್ದಾಗ ಕಣ್ಣಿಗೆ ಕಾಣದಂತೆ ತಲೆ ಕೆಳಗೆ ಹಾಕಿ ಬರೆದುಕೊಳ್ಳುವ ನಟನೆ ಮಾಡಿದೆ. ಹೀಗಾಗಿ ಅನೇಕ ಪಾತ್ರಗಳು ತಪ್ಪಿಹೋದವು. ಅವು ಬೇರೆಯವರ ಪಾಲಾದವು. ಅವರೊಮ್ಮೆ ಹೆಣದ ಮುಂದೆ ಹಾಡುವ ಹಾಡನ್ನು ರಾಗವಾಗಿ ಹಾಡಿದ್ದರು: 'ಹೂವ ಸೂರ್ಯಾವೊ ಸದ್ಗುರುವಿನ ಮ್ಯಾಲಾ, ಹೂವ ಸೂರ್ಯಾವೊ'. ವಿದ್ಯಾರ್ಥಿಗಳನ್ನು ಉದ್ದೇಶಿಸಿ ಹೇಳಿದರು. 'ಎಲ್ಲಾ ಧಾಟಿಗಳನ್ನು ಕೇಳಿಸಿಕೊಳ್ಳಬೇಕು. ಸತ್ತಾಗ ಹಾಡುವ ಧಾಟಿ, ಸೋಬಾನೆ ಪದದ ಧಾಟಿ, ಕೋಲಾಟದ ಧಾಟಿ, ಡಪ್ಪಿನಾಟದ ಧಾಟಿ, ಇತ್ಯಾದಿ. ಆಗ ಮಾತ್ರ ಕಾವ್ಯದಲ್ಲಿ ಹೊಸ ಪ್ರಯೋಗಗಳನ್ನು ಮಾಡಲಿಕ್ಕೆ ಸಾಧ್ಯ' ಅಂತ ಹೇಳಿದರು. ಇಂಥ ಹಾಡುಗಳನ್ನು ಕೇಳಿಸಿಕೊಳ್ಳಲು ನಮ್ಮನ್ನೆಲ್ಲ ದಲಿತಕೇರಿಗಳಿಗೆ ಕರೆದುಕೊಂಡು ಹೋಗಿದ್ದರು. ಭಜನೆ ಮ್ಯಾಳಗಳ ಎದುರು ಕೂರುವಂತೆ ಮಾಡುತ್ತಿದ್ದರು. ತತ್ವಪದಗಳನ್ನು ಕೇಳಿಸುತ್ತಿದ್ದರು. ಕಾವ್ಯದ ಧಾಟಿಗಳು ಜನರ ಜೀವನದ ನಡುವಿನಿಂದ ಎದ್ದು ಬರಬೇಕೆಂಬುದನ್ನು ಬಲವಾಗಿ ನಂಬಿದ್ದರು. ಹೀಗಾಗಿಯೇ ಅವರ ಕಾವ್ಯದಲ್ಲಿ ಸಮುದಾಯದ ಧಾಟಿಗಳು ದೊಡ್ಡ ಪ್ರಮಾಣದಲ್ಲಿ ಸೇರಿಕೊಂಡವು. ವಾಲೀಕಾರರಿಗೆ ಸದಾ ಓದುತ್ತಲೇ ಇರಬೇಕೆನ್ನುವ ಹುಚ್ಚು. ತಮ್ಮ ಕೋಣೆಯಲ್ಲಿ ಪುಸ್ತಕಗಳನ್ನು ಗುಡ್ಡೆ ಹಾಕಿಕೊಂಡು ಕೂತಿರುತ್ತಿದ್ದರು. ಬರಹಕ್ಕಾಗಿಯೇ ಅವರ ಬಳಿ ಒಂದು ವೇಳಾಪಟ್ಟಿಯಿತ್ತು. ಎಷ್ಟು ಗಂಟೆಯಿಂದ ಎಷ್ಟು ಗಂಟೆಯವರೆಗೆ ಕಾವ್ಯ ರಚನೆ, ಕಾದಂಬರಿ ರಚನೆ, ಮಹಾಕಾವ್ಯದ ರಚನೆ, ನಾಟಕ ರಚನೆ ಪ್ರತಿಯೊಂದಕ್ಕೂ ಅದರದೇ ಆದ ಸಮಯ ನಿಗದಿಪಡಿಸಲಾಗಿತ್ತು. 'ಸರ್, ವೇಳಾಪಟ್ಟಿ ಹಾಕಿಕೊಂಡು ಬರಹ ಮಾಡಲು ಸಾಧ್ಯವೆ?' ಅಂತ ಕೇಳಿದ್ದೆ. ಅದಕ್ಕವರು 'ದೊಡ್ಡ ಶಿಸ್ತಿಲ್ಲದಿದ್ದರೆ ದೊಡ್ಡ ಸಾಧನೆ ಸಾಧ್ಯವಿಲ್ಲ' ಎಂದರು. ನಾನು ಸುಮ್ಮನಾದೆ. ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿ ಅವರನ್ನು ಹೆಚ್ಚು ಬಾರಿ ಕಂಡಿದ್ದೆ. ವಿಶ್ವವಿದ್ಯಾಲಯದ ಗಿಡಗಳ ಕೆಳಗೆ ಕುಳಿತು ಓದುವುದು ಅವರಿಗೆ ಇಷ್ಟ. ಅವರ ಮುಗ್ಧತೆಗೆ ಅವರೇ ಸಾಟಿ. ಒಮ್ಮೆ ಲಂಕೇಶ್ ಪತ್ರಿಕೆಯಲ್ಲಿ ಅವರ ಕುರಿತು ತಪ್ಪು ಸುದ್ದಿಯೊಂದು ಪ್ರಕಟವಾಗಿತ್ತು. ಇದರಿಂದ ಕೆರಳಿದರು. ಲಂಕೇಶರ ವಿರುದ್ಧ ಲೇಖನ ಬರೆದರು. ಅದರಲ್ಲಿ 'ಲಂಕೇಶರ ಕುಂಡೆಯ ಎಲುಬು ಮುರಿಯುತ್ತೇನೆ' ಅಂತ ಬರೆದಿದ್ದರು. ಅದನ್ನು ಮುಂದೆ ತಮ್ಮ ಪುಸ್ತಕವೊಂದರಲ್ಲಿ ಲೇಖನವಾಗಿ ಕೂಡ ಪ್ರಕಟಿಸಿಕೊಂಡರು. ಮುಗ್ಧತೆಯ